ಶ್ರೀ ಕೆ. ಪ್ರಭಾಕರ್.—ಹತ್ತು ನಿಮಿಷ ಹಾಗೆ ಹೀಗೆ ಮಾಡಬಹುದು. ಅದರಲ್ಲಿ ತಪ್ಪಿಲ್ಲ. ತಾವು ಅವಕಾಶವನ್ನು ಕೊಟ್ಟೇ ತೀರಬೇಕು.

ಉಪಾಧ್ಯಕ್ಷರು.—ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಮೊದಲನೇ ಸಾರ್ತಿಗೆ ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಹಿಂದೆ ಆಗಲೇ 2-3 ಸಾರ್ತಿ ಹೀಗೆ ಮಾಡಿದೆ.

ಶ್ರೀ ಕೆ. ಪ್ರಭಾಕರ್.—ಮೂರು ಪ್ರಶ್ನೆಗೆ ತಾವು ಅವಕಾಶ ಕೊಡಿ. ಮೆಂಬರುಗಳ ಅಶೋತ್ತರವನ್ನು ಹಾಳು ಮಾಡಬೇಡಿ. ನಾನು ಕೊಟ್ಟಿರುವ ಎರಡು ಪ್ರಶ್ನೆಗಳನ್ನೂ ತೆಗೆದುಕೊಳ್ಳಬೇಕು, ಸ್ವಾಮಿ.

ಉಪಾಧ್ಯಕ್ಷರು.—ನಿಮ್ಮ ಪ್ರಶ್ನೆ ಮತ್ತು ಉತ್ತರ ಎರಡೂ ಪ್ರೊಸೀಡಿಂಗ್‌ನಲ್ಲಿ ಪ್ರಿಂಟ್ ಆಗಿ ಬರುತ್ತದೆ. ಕರೆದಾಗ ನೀವು ಇಲ್ಲದೇ ಹೋದರೆ ಈಗ ಏನೂ ಮಾಡುವುದಕ್ಕಾಗುವುದಿಲ್ಲ.

SHORT NOTICE QUESTION AND ANSWER

Boat Tragedy in Krishna River

6. **Sri S. M. GURADDY** (Muddebihal).—

Sri A. R. BADARINARAYAN (Shimoga).—

Will the Chief Minister be pleased to state :—

(*a*) whether it is a fact that a boat tragedy occurred on 3rd September, 1970 in Krishna river near Thangadi village ;

(*b*) the number of persons who died in the boat tragedy ;

(*c*) the reason for the tragedy ;

(*d*) whether compensation has been paid to the families of the deceased ;

(*e*) the number of boat tragedies alreday occurred at that place ?

Sri VEEREDRA PATIL (Chief Minister).—

(*a*) Yes.

(*b*) It is learnt that 64 persons died.

(c) It is due to hudling of more than 100 persons in the boat which had a capacity for carrying about 31 persons and the rowing of the boat by inexperienced tourists.

(*d*) Yes.

(*e*) Yes. Similar tragedy had occurred in the year 1961.

ಶ್ರೀ ಎಸ್. ಎಂ. ಗುರೆಡ್ಡಿ.—ಸೆಪ್ಟೆಂಬರ್ 3 ನೇ ದಿನಾಂಕದಂದು ತಂಗಡಿ ಗ್ರಾಮದ ಬಳಿ ಕೃಷ್ಣಾ ನದಿಯಲ್ಲಿ ಎರಡು ದೋಣಿ ಮುಳುಗಿದ್ದುದು ನಿಜ ಎಂದು ಹೇಳಿದ್ದೀರಿ. ಇದನ್ನು ಸರ್ಕಾರದವರೇ ನೇರವಾಗಿ ನಡೆಸುತ್ತಿದ್ದರೇ ಅಥವಾ ಯಾರಿಗಾದರೂ ಕಂಟ್ರಾಕ್ಟ್ ಕೊಟ್ಟಿದ್ದರೇ ?

†ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಕಂಟ್ರಾಕ್ಟರ್ ಮುಖಾಂತರವೇ ನಡೆಸುತ್ತಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈ ಕಂಟ್ರಾಕ್ಟನ್ನು ಪಿ. ಡಬ್ಲ್ಯು. ಡಿ. ಮುಖಾಂತರ ಟೆಂಡರ್ ಕರೆದು ಕೊಟ್ಟಿದ್ದೀರಾ ? ಅಥವಾ ತಾಲ್ಲೂಕು ಬೋರ್ಡ್ ಮುಖಾಂತರ ಕೊಟ್ಟಿದ್ದೀರಾ ? ಇದನ್ನು ಪಿ.ಡಬ್ಲ್ಯು.ಡಿ. ಮುಖಾಂತರ ಕೊಟ್ಟಿದ್ದರೆ ಆ ದೋಣಿ ಕೆಪಾಸಿಟಿ ಎಷ್ಟು ? ಯಾರು ನಡೆಸಬೇಕು ಇದೆರ್ನಾ ಅಗ್ರಿಮೆಂಟ್ ಕಂಡೀಷನ್‌ನಲ್ಲಿ ಇರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಕಾಂಟ್ರಾಕ್ಟನ್ನು ಪಿ.ಡಬ್ಲ್ಯು.ಡಿ. ಮುಖಾಂತರವೇ ಕೊಟ್ಟಿದ್ದರೋ ಅಥವಾ ತಾಲ್ಲೂಕು ಬೋರ್ಡ್ ಮುಖಾಂತರವೇ ಕೊಟ್ಟಿದ್ದಾರೋ ಗೊತ್ತಿಲ್ಲ. ಅಂತೂ ಕಾಂಟ್ರಾಕ್ಟ್ ಮುಖಾಂತರವೇ ಟೆಂಡರ್ ಕರೆದು ಕೊಟ್ಟಿದೆ. ಮತ್ತು ಅಗ್ರಿಮೆಂಟ್ ಮುಂತಾದವನ್ನೂ ಕೂಡ ಮಾಡಿದ್ದಾರೆ. ಯಾರು ಬೋಟ್ ನಡೆಸಬೇಕು, ಎಷ್ಟು ಜನರಿಗೆ ಕೂಡಿಸಬೇಕು ಅವೆರ್ನಾ ಆ ಅಗ್ರಿಮೆಂಟ್ ಕಂಡೀಷನ್‌ನಲ್ಲಿದೆ.

ಶ್ರೀ ನದಾಫಿಪಪ್ಪ ಪಾಟೀಲ್.—ಸ್ವಾಮಿ, ಇದೇ ಸ್ಥಳದಲ್ಲಿ ಮೊದಲು ಎಷ್ಟೋ ದುರಂತಗಳಾಗಿವೆ. ಮತ್ತು ತಾವು 1961 ರಲ್ಲಿ ಇದೇ ಸ್ಥಳದಲ್ಲಿ ದುರಂತ ಆಯಿತು ಎಂದು ಹೇಳಿದ್ದೀರಿ. ಹೀಗಿದ್ದರೂ ಕೂಡ ಸುಮಾರು 9 ವರ್ಷದಿಂದಲೂ ಪಿ. ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್‌ನವರು ಸರಿಯಾದ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್.—ಪಿ.ಡಬ್ಲ್ಯು.ಡಿ. ಯವರು ಸರಿಯಾದ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರತಿವರ್ಷವೂ ಕೂಡ ಈ ರೀತಿ ಪೆಟ್ಟಿ ಕಂಟ್ರಾಕ್ಟರ್‌ಗೆ ಕೊಟ್ಟು ಕೊಂಡು ಬರುವ ಪದ್ಧತಿ ನಡೆದುಕೊಂಡು ಬರುತ್ತಾ ಇದೆ. ಆ ಕಂಟ್ರಾಕ್ಟ್ ಕೊಡುವುದೂ ಕೂಡ ಕೆಲವು ಕಂಡೀಷನ್ಸ್ ಮೇಲೆ ಕೊಟ್ಟಿದ್ದಾರೆ. ಆದರೆ ಈ ಅನಾಹುತವಾಗುವುದಕ್ಕೆ ಕಾರಣ ಏನು ಎಂದರೆ ಆ ಬೋಟಿನವನ ಜವ್ವಾರಿ ಎಂದು ಕಾಣುತ್ತದೆ. ಅಲ್ಲಿ ವಾಚಮನ್ ತಪ್ಪಿದ್ದರೂ ಕೂಡ ಜನಗಳು ತಾವಾಗೇ ಬಂದು ಆ ದೋಣಿಯಲ್ಲಿ 110 ಜನ ಒಳಗಡೆ ಕೂತುಕೊಂಡು ಅನುಭವ ಇಲ್ಲದೇ ಇರುವವರು ಆ ದೋಣಿಯನ್ನು ನಡೆಸಿದ್ದರಿಂದ ಈ ರೀತಿ ಅನಾಹುತವಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಸ್ಥಳದಲ್ಲಿ ಹಿಂದೆ ದುರಂತ ನಡೆದಿದೆಯೆಂದು ಸರ್ಕಾರ ಮನಗಂಡಿದೆ. ಆದುದರಿಂದ ಈ ಸ್ಥಳದಲ್ಲಿ ಖಾಯಂ ಆಗಿ ಒಂದು ಬ್ರಿಡ್ಜನ್ನು ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೃಷ್ಣಾ ಮತ್ತು ದೊಡ್ಡ ದೊಡ್ಡ ನದಿಗಳು ಇರುವ ಕಡೆ ಎಲ್ಲಾ ಕಡೆಯೂ ಸೇತುವೆಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಆ ಎರಡು ನದಿಯ ದಂಡೆಗಳಲ್ಲಿ 11 ಗ್ರಾಮಗಳಿವೆ. ಒಂದೊಂದು ಗ್ರಾಮವೂ 1—2—3 ಮೈಲಿಗಳು ಇರುತ್ತವೆ, ಆದುದರಿಂದ ಪ್ರತಿಯೊಂದು ಕಡೆಯೂ ಸೇತುವೆ ಕಟ್ಟಿ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಆದರೆ ಮುಂದೆ ಇಂತಹ ಘಟನೆ ಆಗದೇ ಇರುವ ರೀತಿಯಲ್ಲಿ ನೋಡಿಕೊಳ್ಳುವ ಹಾಗೆ ಮಾಡುವುದಕ್ಕೆ ಡಿವಿಜನಲ್ ಕಮೀಷನರನ್ನು ಏನ್‌ಕ್ವೈರಿ ಆಫೀಸರನ್ನಾಗಿ ನೇಮಿಸಿದ್ದೇವೆ. ಅವರ ವರದಿ ಬಂದಮೇಲೆ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅಂತಹ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂಗೌಡ.—ಸ್ವಾಮಿ ಮೃತಪಟ್ಟ ಕುಟುಂಬದವರಿಗೆ ಪರಿಹಾರ ಧನ ಎಷ್ಟು ಕೊಟ್ಟಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಕಾಂಪನ್ಸೇಷನ್ನನ್ನು ಡಿವಿಷನರ್ ಕಮೀಷನರ್ ಆನ್ ದಿ ಸ್ಪಾಟ್ 600 ರೂಪಾಯಿ ಕೊಟ್ಟಿದ್ದಾರೆ. ಅದೇ ರೀತಿ ಡೆಪ್ಯೂಟಿ ಕಮೀಷನರ್ ಡಿಸ್‌ಪೋಸಲ್‌ನಲ್ಲಿ 5 ಸಾವಿರ ರೂಪಾಯಿ ಮೊದಲೇ ಕೊಟ್ಟಿದೆ ಮತ್ತು ಸರ್ಕಾರ 10 ಸಾವಿರ ರೂಪಾಯಿಯನ್ನು ಡಿವಿಜನ್ನಿನರ್ ಕಮೀಷನರವರ ಡಿಸ್‌ಪೋಸಲ್‌ನಲ್ಲಿ ಇಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಒಂದನೆಯದಾಗಿ ಪಿ.ಡಬ್ಲ್ಯೂಡಿ, ಡಿಪಾರ್ಟ್‌ಮೆಂಟ್‌ನವರು ಇದನ್ನು ಟೆಂಡರ್ ಕರೆದು ಕೊಟ್ಟಿದ್ದಾರೆ. ಮತ್ತು ಆ ಕಂಟ್ರಾಕ್ಟರಿಂದ ದೋಣಿ ನಡೆಸತಕ್ಕಂಥ ಅಗ್ರಿಮೆಂಟ್ ಏನು ಇದೆಯೋ ಅದೂ ಆಗಿದೆ ಎಂದು ಹೇಳಿದರು. ಆದರಲ್ಲಿ ದೋಣಿ ಯಾರು ನಡೆಸಬೇಕು ಅನ್ನುವ ಅಗ್ರಿಮೆಂಟ್ ಆಗಿರುವುದಿಲ್ಲವೆ ? ಮತ್ತು (೨)ಗೆ ಉತ್ತರವಾಗಿ ಸುಮಾರು 31 ಜನರನ್ನು ತುಂಬಿಕೊಂಡು ಹೋಗುವ ದೋಣಿಯಲ್ಲಿ ನೂರಕ್ಕಿಂತಲೂ ಹೆಚ್ಚು ಮಂದಿಯನ್ನು ತುಂಬಿದ್ದುದು ಹಾಗೂ ಅನುಭವ ಇಲ್ಲದ ಪ್ರವಾಸಿಕರು ದೋಣಿಯನ್ನು ಚಲಾಯಿಸಿದ್ದು ಕಾರಣ ಎಂದು ಹೇಳಿದ್ದೀರಿ. ಆದರೆ ಪ್ರವಾಸ ಮಾಡತಕ್ಕಂಥ ಜನರನ್ನೇ ಈ ದೋಣಿಯನ್ನು ನಡೆಸುವುದಕ್ಕೆ ಹೇಗೆ ಬಿಟ್ಟಿರಿ ? ಅಗ್ರಿಮೆಂಟ್ ಪ್ರಕಾರ ದೋಣಿ ನಡೆಸತಕ್ಕಂಥ ಕಂಟ್ರಾಕ್ಟರೇ ಈ ದುರಂತಕ್ಕೆ ಕಾರಣರು. ಆದುದರಿಂದ ಈ ಕಂಟ್ರಾಕ್ಟರ್ ಮೇಲೆ ಕೇಸು ಹಾಕುವುದಕ್ಕೆ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಈ ವಿಚಾರವಾಗಿ ಹೇಳಿದ್ದೇನೆ. ದೋಣಿಯನ್ನು ಖಾಯಂ ಆಗಿ ನಡೆಸುತ್ತಾ ಇದ್ದವನು ನಡೆಸಿಕೊಂಡು ಹೋಗಿ ಈ ದುರಂತ ಸಂಭವಿಸಿದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅಲ್ಲಗೆ ಒಬ್ಬ ವಾಚ್‌ಮನ್ ಹಾಕಿದ್ದೇವೆ. ಅವನು ಆ ಜನರಿಗೆ ಪ್ರವಾಸ ಮಾಡಬೇಡಿ ಎಂದು ಹೇಳಿದರೂ ಕೂಡ ಅವನ ಮಾತನ್ನು ಕೇಳದೆ ತಾವೇ ದೋಣಿಯನ್ನು ತೆಗೆದುಕೊಂಡು ಹೊರಟರೆ ಅವನೊಬ್ಬನೇ ಏನು ಮಾಡುವುದಕ್ಕಾಗುತ್ತದೆ? ಮತ್ತು ಆ ದೋಣಿಯಲ್ಲಿ ನೂರಾರು ಜನ ಹೋಗಬೇಡಿ ಎಂದು ಹೇಳಿದರೂ ಕೇಳಲಿಲ್ಲ. ಆದುದರಿಂದ ಈ ಘಟನೆಗೆ ಈಡಾಗಿದ್ದಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ತಾವು ಹೇಳಿರುವಂತೆ ಮೃತಪಟ್ಟ ಕುಟುಂಬದವರಿಗೆ ಅನ್ ದಿ ಸ್ಪಾಟ್ 600 ರೂಪಾಯಿ, ಡೆಪ್ಯೂಟಿ ಕಮೀಷನರ್ ಡಿಸ್‌ಪೋಸಲ್‌ನಲ್ಲಿ 5 ಸಾವಿರ ರೂಪಾಯಿ, ಮತ್ತು ಸರ್ಕಾರದವರು ಡಿವಿಷನಲ್ ಕಮಿಷನರ್ ಡಿಸ್‌ಪೋಸಲ್‌ನಲ್ಲಿ 10 ಸಾವಿರ ರೂಪಾಯಿ ಇಟ್ಟಿದ್ದೇವೆ ಎಂದು ಹೇಳಿದ್ದೀರಿ. ಹೀಗೆ ಕೊಟ್ಟರೆ ಒಂದೊಂದು ಕುಟುಂಬಕ್ಕೆ ಎಷ್ಟು ಬರುತ್ತದೆ? ಕುಟುಂಬವನ್ನೇ ಕಳೆದುಕೊಂಡಂಥ ಆ ಜನಕ್ಕೆ ಒಂದೊಂದು ಮನೆಗೆ 100 ರೂಪಾಯಿ ನಂತೆ ಕೊಟ್ಟರೆ ಸಾಕಾಗುತ್ತದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಅದರಲ್ಲಿ ಎಷ್ಟು ಕುಟುಂಬದವರು ಇದ್ದಾರೆ ಅನ್ನುವ ಇನ್‌ಫರ್ಮೇಷನ್ ನನ್ನ ಹತ್ತಿರ ಇಲ್ಲ. ಆದರೆ 64 ಜನ ಪೈಕಿ 15 ಶವಗಳು ಪತ್ತೆ ಆಗಿಲ್ಲ. 49 ಶವಗಳು ಪತ್ತೆ ಆಗಿವೆ. ಇನ್ನು ಎಷ್ಟು ಜನ ಕುಟುಂಬಕ್ಕೆ ಕೊಡಬೇಕೋ ಗೊತ್ತಿಲ್ಲ. ಆದುದರಿಂದ 10 ಸಾವಿರ ರೂಪಾಯಿಯನ್ನು ಡಿವಿಷನಲ್ ಕಮಿಷನರವರ ಡಿಸ್‌ಪೋಸಲ್‌ನಲ್ಲಿ ಇಟ್ಟಿದ್ದೇವೆ. ಇನ್ನೂ ಬೇಕಾಗುತ್ತದೆ ಎಂದು ಅವರು ವರದಿ ಕಳುಹಿಸಿದರೆ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ದುರಂತ ನಡೆದ ಕಾಲದಲ್ಲಿ ಆ ದಿವಸವೇ ಸಭಾ ನಾಯಕರು ಆ ಸ್ಥಳದ ಕೇವಲ ಸ್ವಲ್ಪ ದೂರದಲ್ಲಿ ಪ್ರವಾಸದಲ್ಲಿದ್ದರು ಅಂತ ನಾನು ಪತ್ರಿಕೆಯಲ್ಲಿ ಓದಿದೆ. ಹಾಗೇ ನಾದರೂ ಇದ್ದರೆ ಅಲ್ಲಿಯ ಜನರು ಏನು ಕಷ್ಟ ಪರಿಸ್ಥಿತಿಯಲ್ಲಿದ್ದಾರೆ ಈ ದುರಂತ ಹೇಗೆ ನಡೆಯಿತು ಎಂದು ಅದನ್ನು ಪ್ರತ್ಯಕ್ಷವಾಗಿ ಹೋಗಿ ನೋಡಿ ತಿಳಿದುಕೊಳ್ಳುವುದಕ್ಕೆ ಆ ಸ್ಥಳಕ್ಕೆ ಹೋಗದೇ ಇರುವುದಕ್ಕೆ ಕಾರಣ ಏನು?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಈ ದುರಂತ ಸಂಭವಿಸಿದಾಗ ಅದರ ಸಮೀಪದಲ್ಲಿ ಪ್ರವಾಸ ಮಾಡುತ್ತಿದ್ದರು ಎಂದು ಹೇಳಿದರು. ನಾನು ಅಲ್ಲಿ ಪ್ರವಾಸ ಮಾಡುತ್ತಿದ್ದನೋ ಇಲ್ಲವೋ ಗೊತ್ತಿಲ್ಲ. ಬಹುಶಃ ಗುಲ್ಬರ್ಗಾದಲ್ಲಿ ಪ್ರವಾಸ ಮಾಡುತ್ತಿದ್ದೆ ಎಂದು ನೆನಪಾಗ ಬಹುದು. ಆದರೆ ಅದೇ ಜಿಲ್ಲೆಯವರಾದ ಶ್ರೀಮಾನ್ ಬಿ. ಎಂ. ಪಾಟೀಲರು ಅದೇ ದಿವಸವೇ ಹೋಗಿ ಪ್ರತ್ಯಕ್ಷ ಏನೇನಾಗಿದೆ ಎಂದು ನೋಡಿದ್ದಾರೆ ಮತ್ತು ಅಲ್ಲಿಯ ಡೆಪ್ಯೂಟಿ ಕಮೀಷನರು ಮತ್ತು ಡಿವಿಷನಲ್ ಕಮೀಷನರ್‌ರವರಿಗೆ ಈ ಪರಿಹಾರದ ಕ್ರಮದ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಆದೇಶ ನೀಡಿದ್ದಾರೆ. ಯಾರೂ ಹೋಗಲಿಲ್ಲ ಅಂತ ಏನೂ ಇಲ್ಲ. ಅವರೇ ಹೋಗಿ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿಕೊಂಡು ಬಂದಿದ್ದಾರೆ.

ಶ್ರೀ ಐ. ಸೇಮಶೇಖರಪ್ಪ.—ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಮಾಡಿದ್ದೀರಿ. ಇದರಿಂದ ಏನು ಅನುಕೂಲತೆಗಳು ದೊರೆಯುತ್ತವೆ ಎಂದು ಮಾಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಡಿವಿಜನಲ್ ಕಮಿಷನರ್ ರವರು ಎನ್‌ಕ್ವೈರಿ ಮಾಡ ಬೇಕೆಂದು ಮಾಡಿರುವ ಟರ್ಮ್ಸ್ ಆಫ್ ರೆಫರೆನ್ಸ್ ನೋಡಿದರೆ ತಮಗೆ ಇದರ ವಿಚಾರ ಗೊತ್ತಾಗು ತ್ತದೆ. ಇದರ ವಿವರಗಳು ಈ ರೀತಿ ಇವೆ :

"(1) The circumstances leading to the accident and the cause of the accident.

(2) The adequacy or otherwise of the measures taken immediately after the accident by the local officers to rescue the victims and provide relief to the affected families.

(3) To determine further relief, if any, to be provided to the bereaved families.

(ಶ್ರೀ ವೀರೇಂದ್ರ ಪಾಟೀಲ್)

(4) Whether the arrangements for the inspection and certification of the boat involved in the accident were satisfactory.

(5) The steps to be taken to prevent recurrence of such accidents.

ಇದರ ಎಲ್ಲ ಉದ್ದೇಶಗಳೂ ಇನ್ನು ಮುಂದೆ ಇಂತಹ ದುರಂತಗಳು ಆಗಬಾರದು ಮತ್ತು ಇದರ ಬಗ್ಗೆ ಮುಂದೆ ಯಾವ ರೀತಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕಾಗಿಯೇ ಡಿವಿಜನರ್ ಕಮಿಷನರ್‌ರವರ ಎಲ್ಲವನ್ನೂ ಕೂಲಂಕಷವಾಗಿ ವಿಚಾರಣೆ ಮಾಡಿ ವರದಿ ಕಳುಹಿಸಿ ಎಂದು ಹೇಳಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗಾಗಲೇ ಇಂತಹ ಒಂದು ದುರಂತವಾಗಿರುವುದರಿಂದ ಮುಂದಿನ ವರ್ಷದೊಳಗಾದರೂ ಇಲ್ಲಿ ಜನರಿಗೆ ಸಮಾಧಾನವಾಗುವಂತೆ ಸರಿಯಾದ ಒಂದು ಲಾಂಚ್ ಇಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಡಿವಿಜನಲ್ ಕಮಿಷನರ್‌ರವರ ರಿಪೋರ್ಟ್‌ನ್ನು ಕಾಯುತ್ತಿದ್ದೇವೆ. ಇದಕ್ಕಾಗಿ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಇಲ್ಲಿ ಸರಿಯಾದ ಬೋಟು ಇರಲಿಲ್ಲ ಮತ್ತು ಲಾಂಚ್ ಮಾಡುವ ವ್ಯವಸ್ಥೆ ಕೂಡ ಇರಲಿಲ್ಲ ಎಂದು ಕೇಳುತ್ತೇವೆ. ಇದರಲ್ಲಿ ಬೋಟು ನಡೆಸುವವರು ಎಂದರೆ ಇಲ್ಲಿನ ಕಂಟ್ರಾಕ್ಟರು ಸರಿಯಾದ ಸೂಚನೆ ಕೊಟ್ಟಿರಲಿಲ್ಲ ಎಂದು ಕೇಳುತ್ತೇವೆ. ನಾವಿಕರ ಅಜಾಗರೂಕತೆಯಿಂದ ಇಂತಹ ಕಷ್ಟಗಳು ಇಲ್ಲಾಗಿವೆ ಅಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ತಿಳಿದು ಬಂದಿರುವಂತೆ ದೋಣಿಯನ್ನು ಸರಿಯಾಗಿ ಕಟ್ಟದೆ ಬೋಟನ್ನು ತೆಗೆದುಕೊಂಡು ಹೋದರು ಎಂದು ಇದೆ. ಆವೊತ್ತಿನ ದಿವಸ ಹೆಚ್ಚು ಜನ ಬಂದಿದ್ದರು ಎಂದು ಗೊತ್ತಾಗಿದೆ. ಇಲ್ಲ ಇದೊಂದೇ ದೋಣಿಯಲ್ಲ. ಬೇರೆ ಇನ್ನೊಂದು ದೋಣಿಯನ್ನು ಇಲ್ಲಿನ ಕಂಟ್ರಾಕ್ಟರು ತೆಗೆದುಕೊಂಡು ಹೋಗಿ ಜನರನ್ನು ದಾಟಿಸಿದ್ದರು. ಆದರೆ ಇಲ್ಲಿ ಇದ್ದ ಈ ದೋಣಿಯಲ್ಲಿ ಜನರನ್ನು ದಾಟಿಸುವುದರೊಳಗೆ ಇಂತಹ ದುರಂತವಾಗಿದೆ ಎಂದು ಗೊತ್ತಾಗಿದೆ, ಇದರಲ್ಲಿ ನಾವಿಕರು ತಾವಾಗಿಯೇ ಏನು ಮಾಡಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ.

ಶ್ರೀ ಬೋಳಾ ರಘುರಾಮಶೆಟ್ಟಿ.—ಇಂತಹ ದುರಂತಕ್ಕೆ ಕಾರಣ ಇಲ್ಲಿರುವ ದೋಣಿ ನಡೆಸುವ ವಾಚ್‌ಮನ್‌ದಿಂದ ಆಗಿರುವುದರಿಂದ ಇದು ಡೆರಿಲಕ್ಷನ್ ಆಫ್ ಡ್ಯೂಟಿ ಆಗುತ್ತದೆ. ಇಂತಹವರ ಮೇಲೆ ಏಕೆ ಸರಕಾರ ತಕ್ಕ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ವೀರೇಂದ್ರ ಪಾಟೀಲ್.—ವಾಚ್‌ಮೆನ್ ಏನು ತಾನೆ ಮಾಡಲಾಗುತ್ತದೆ ? ಒಮ್ಮೆಗೆ ನೂರಹತ್ತು ಜನ ಬಂದು ಅವರನ್ನು ಹೆದರಿಸಿದರೆ ಅವರು ಏನು ತಾನೆ ಮಾಡಲು ಸಾಧ್ಯ ? ಇವರ ಮೇಲೆ ಕ್ರಮ ಜರುಗಿಸಲು ಸಾಧ್ಯವಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗಾಗಲೇ ದುರಂತಕ್ಕೆ ಈಡಾಗದ ಕುಟುಂಬಗಳಿಗೆ ಪರಿಹಾರ ಹಣವನ್ನು ಡಿ.ಸಿ. ಕಡೆಗೆ ಕೊಟ್ಟಿದೆ ಎಂದು ಹೇಳಿದಿರಿ. ಇದು ಸಾಲದು ಎಂದು ನನ್ನ ಭಾವನೆ. ಇದನ್ನು ಹೆಚ್ಚು ಮಾಡಿ ಕೊಡಲು ಸರಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಡೆಪ್ಯುಟಿ ಕಮಿಷನರು ಕಡೆಗೆ ಹಣಕಳುಹಿಸಿಕೊಡಲಾಗಿದೆ. ಅವರು ಇನ್ನೂ ಹೆಚ್ಚು ಹಣ ಬೇಕು ಎಂದು ಬೇಡಿದರೆ ಆಗ ಅದನ್ನು ಕೊಡುವ ಬಗ್ಗೆ ವಿಚಾರ ಮಾಡಬಹುದು.

Sri N. B. SIRDESAI.—May I know who were responsible for similar tragedy that occurred in 1961 ?

Sri VEERENDRA PATIL.—I do not know about 1961 tragedy, because I do not have that information before me. I know this much that such an accident had occurred in 1961 also.

ಶ್ರೀ ಆರ್. ಜಿ. ವಾಲ.—1961 ರಲ್ಲಿ ಆಂಧ್ರದಲ್ಲಿ ಕೂಡ ಇಂತಹ ದುರಂತವಾಗಿತ್ತು. ಇಲ್ಲಿ ನಡೆಸಿದ ನಾವಿಕರಿಗೆ ಶಿಕ್ಷೆ ಕೂಡ ಆಗಿತ್ತು. ಇದೇ ರೀತಿ ಇಲ್ಲಿ ನಿಯಮ ಮಾಡುವಾಗ ದೋಣಿ ನಡೆಸುವವರು ಅಜಾಗರೂಕತೆಯಿಂದ ನಡೆಸಿದರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಾರೆ ಎಂದೇಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಾವಿಕರನ್ನು ಶಿಕ್ಷೆಗೆ ಗುರಿ ಮಾಡುವ ಪ್ರಸಂಗ ಕಾಣುವುದಿಲ್ಲ. ಇದರಲ್ಲಿ ನಾವಿಕನ ಜವಾಬುದಾರಿ ಎಷ್ಟುಮಟ್ಟಿಗೆ ಇದೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಅನೇಕ ಕಡೆ ನದಿಗಳನ್ನು ದಾಟುವುದಕ್ಕೆ ಸೇತುವೆಗಳನ್ನು ಕಟ್ಟಬೇಕಾಗುತ್ತದೆ. ಎಲ್ಲ ನದಿಗಳಿಗೂ ಬ್ರಿಡ್ಜ್‌ಗಳನ್ನು ಕಟ್ಟುವುದು ಎಂದರೆ ಬಹಳ ಕಷ್ಟವಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಈ ದೇಶದಲ್ಲಿ ಬಹಳ ದೊಡ್ಡ ನದಿಗಳಾದ ಗೋದಾವರಿ, ಗಂಗಾ, ಬ್ರಹ್ಮಪುತ್ರಾ ಇತ್ಯಾದಿಗಳ ಮೇಲೆ ಕೂಡ ಸೇತುವೆಗಳನ್ನು ಕಟ್ಟಿದ್ದರೂ ಒಂದೊಂದು ವೇಳೆ ಇಂತಹ ದುರಂತಗಳು ಆಗುತ್ತವೆ. ಇದನ್ನು ತಪ್ಪಿಸಲು ಅವರೂ ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ನಾವೂ ಕೂಡ ಇಲ್ಲಿ ಇಂತಹ ದುರಂತಗಳು ಆದಾಗ ಇದನ್ನು ತಪ್ಪಿಸುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ಇಲ್ಲಿ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ನ್ಯಾಪನರ್ ಹೈ ವೇ ನಂಬರು 13 ರ ಮೇಲೆ ಕುಂದಗಿ ಎನ್ನುವ ಸ್ಥಳದಲ್ಲಿ ಇದೇ ತರಹದ ಒಂದು ದುರಂತ 1961 ರಲ್ಲಿ ಆಗಿತ್ತು. ಇಲ್ಲಿ ಕೂಡ ಮುಂದೆ ಇಂತಹ ಕಷ್ಟಗಳು ಬರದಿರಲು ಎಂದು ಅಲ್ಲಿ ಸಿಮೆಂಟು ಮಾರ್ಟರ್‌ನಿಂದ ಬಂಡು ಮಾಡಿಸಿ ಹಾಕುವ ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡಿದ್ದರು. ಇಲ್ಲೂ ಕೂಡ ಇದೇ ರೀತಿ ಇಲ್ಲಿನ ಕಂಟ್ರಾಕ್ಟರಿಗೆ ಸರಿಯಾದ ಒಂದು ಬಂಡು ಹಾಕಿಸುವ ಬಗ್ಗೆ ವಿಚಾರ ಮಾಡಬೇಕು ಎನ್ನುವುದನ್ನು ಯೋಚಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇಲ್ಲಿ ಯಾವ ತರಹದ ಬಂಡನ್ನು ಮಾಡುವುದು ಸಾಧ್ಯ ಎನ್ನುವುದನ್ನು ಇಲ್ಲಿನ ಕಂಟ್ರಾಕ್ಟರುಗಳೊಡನೆ ವಿಚಾರ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ನಾರಾಯಣಪುರ ಹಾಗೂ ಆಲಮಟ್ಟಿ ಪೂರ್ತಿ ಆಗುವುದಕ್ಕಿಂತ ಮುನ್ನ ಉದ್ಭವವಾಗಿರುವುದು ಇನ್ನು ಮುಂದೆ ಇಂತಹ ದೊಡ್ಡ ಪ್ರಮಾಣದ ಕಷ್ಟಗಳು ಬರಲಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ.

QUESTIONS FOR ANSWERS ON THE DAY
(but not taken up)
Water Supply Scheme to Kalghatagi

154. **Sri F. S. PATIL** (Kalghatgi).—

Will the Minister for Development be pleased to state :—

(*a*) whether it is a fact that they have sanctioned a scheme for supplying drinking water to the people of Kalghatgi under N.R.W.S.;

(*b*) the date on which the above scheme was sanctioned ;

(*c*) whether they have received the contribution from Kalghatgi Town Pancayat towards the said scheme ;

(*d*) the obstacles in starting the work of this scheme ;

(*e*) when the work relating to this scheme will be started ?

Sri P. M. NADGOUDA (Minister for Development).—

(*a*) Yes.

(*b*) 12-4-1967.

(*c*) First instalment of Rs. 25,600 has been received.

(*d*) The panchayat has to pay the remaining instalment amount.

(*e*) It is started.